ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
**KARNATAKA LEGISLATIVE ASSEMBLY RESEARCH AND REFERENCE BRANCH**

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT: ಚುನಾವಣಾ ಆಯೋಗ

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ ದಿನಾಂಕ : DATE : 03/03/2020

# ಸರ್ಕಾರಿ ವೆಚ್ಚದಲ್ಲಿ ಎಲೆಕ್ಷನ್: ಆಯೋಗದ ಸಹಮತವಿಲ್ಲ

**ನವದೆಹಲಿ:** ಚುನಾವಣೆಗಳನ್ನು ಸರ್ಕಾರದ ವೆಚ್ಚದಲ್ಲಿಯೇ ನಡೆಸಬೇಕು ಎಂಬ ಪ್ರಸ್ತಾಪಕ್ಕೆ ಚುನಾವಣಾ ಆಯೋಗ ಸಹಮತ ಹೊಂದಿಲ್ಲವೆಂದು ಕೇಂದ್ರ ಸರ್ಕಾರ ಲೋಕಸಭೆಗೆ ತಿಳಿಸಿದೆ. ಪ್ರಸ್ತಾಪದ ಕುರಿತು ಚುನಾವಣಾ ಆಯೋಗ ತನ್ನ ಅಭಿ ಪ್ರಾಯ ವನ್ನು ತಿಳಿಸಿದೆ ಎಂದು ಕೇಂದ್ರ ಹಣಕಾಸು ಖಾತೆ ಸಹಾಯಕ ಸಚಿವ ಅನುರಾಗ್ ಠಾಕೂರ್ ಲಿಖಿತ ಉತ್ತರದಲ್ಲಿ ಹೇಳಿದ್ದಾರೆ. ಅಭ್ಯರ್ಥಿಗಳು ಮಾಡುವ ವೆಚ್ಚದ ಮೇಲೆಯೇ ನಿಯಂತ್ರಣ ಹೇರಲು ಮತ್ತು ನಿಷೇಧಿಸಲು ಸಾಧ್ಯವಾಗಿಲ್ಲ. ಹೀಗಾಗಿ, ಸರ್ಕಾರಿ ವೆಚ್ಚದಲ್ಲಿಯೇ ಚುನಾವಣೆ ಎಂಬ ಪ್ರಸ್ತಾಪದ ಬಗ್ಗೆ ಅದು ಒಲವು ತೋರಿಸಿಲ್ಲ ಎಂದಿದ್ದಾರೆ.

**ಗರ್ಭಪಾತ ತಿದ್ದುಪಡಿ ವಿಧೇಯಕ ಮಂಡನೆ:** ಗಂಭೀರ ಸಂದರ್ಭಗಳಲ್ಲಿ ಗರ್ಭಪಾತ ಮಾಡುವ ಅವಧಿಯ ಮಿತಿಯನ್ನು 20 ರಿಂದ 24 ವಾರಗಳಿಗೆ ಹೆಚ್ಚಿಸುವ ವಿಧೇಯಕವನ್ನು ಲೋಕಸಭೆಯಲ್ಲಿ ಮಂಡಿಸಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ಡಾ.ಹರ್ಷವರ್ಧನ್ ಗರ್ಭಪಾತ (ತಿದ್ದುಪಡಿ) ವಿಧೇಯಕ 2020ನ್ನು ಪ್ರತಿಪಕ್ಷಗಳ ಗಲಾಟೆ ನಡುವೆ ಮಂಡಿಸಿದರು. ಅತ್ಯಾಚಾರಕ್ಕೆ ಒಳಗಾದ ಸಂತ್ರಸ್ತರು, ವಿಕಲಾಂಗತೆಯಿಂದ ಕೂಡಿದ ಅಪ್ರಾಪ್ತರಿಗೆ ಅನ್ಯಾಯವಾದ ಸಂದರ್ಭಗಳಲ್ಲಿ ಗರ್ಭಪಾತ ಮಾಡುವ ಅವಧಿಯನ್ನು 20 ರಿಂದ 24 ವಾರಗಳಿಗೆ ಹೆಚ್ಚಿಸುವ ಬಗ್ಗೆ ಕೇಂದ್ರ ಸಂಪುಟ ಇತ್ತೀಚೆಗೆ ನಿರ್ಧಾರ ಕೈಗೊಂಡಿತ್ತು. ಕೇಂದ್ರ ಸರ್ಕಾರ ಇದೊಂದು ಅತ್ಯಂತ ಪ್ರಗತಿಯುಕ್ತವಾಗಿರುವ ವಿಧೇಯಕ ಎಂದು ಹೇಳಿಕೊಂಡಿದೆ.